ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಮತ್ತು (ಆ) ವರೂರ—ಹಿಂಡಸಗೇರಿ ರಸ್ತೆಯ ರಸ್ತೆಯ ಒಟ್ಟು ಉದ್ದ ೨೦.೩೦ ಕಿ.ಮಿ. ಇದರಲ್ಲಿ ೫ ಕಿ. ಮಿ. ಉದ್ದಕ್ಕೆ ಡಾಂಬರು ಹಾಕಲಾಗಿದೆ. ಉಳಿದ ೧೫.೩ ಕಿ.ಮಿ. ಉದ್ದಕ್ಕೆ ಡಾಂಬರು ಹಾಕಲು ಸುಮಾರು ೧೨ ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಆರ್ಥಿಕ ಲಭ್ಯತೆಗನುಗುಣವಾಗಿ, ಈ ಕೆಲಸವನ್ನು ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಮುಂಧೋಳ ಹಾಗೂ ಬೀಳಗಿ ತಾಲ್ಲೂಕಿನಲ್ಲಿ ಭೂಮಿ ಸಮಪಾತಳಿ ಕರಿತಂ

೧೨೮೮ (೩೭೦) ಶ್ರೀ ಬಾಬುರೆಡ್ಡಿ ವಿ. ತುಂಗಳ (ಬೀಳಗಿ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಘಟಪ್ರಭಾ ಮತ್ತು ಮಲಪ್ರಭಾ 'ಕಾಡಾ' ಯೋಜನೆ ಅಡಿಯಲ್ಲಿ ಈ ವರ್ಷ ಬೀಳಗಿ ಹಾಗೂ ಮುಧೋಳ ತಾಲ್ಲೂಕುಗಳಲ್ಲಿ ಸಮಪಾತಳಿಯನ್ನು ಎಷ್ಟು ಎಕರೆ ಜಮೀನಿನಲ್ಲಿ ಕೈಗೊಳ್ಳಲಾಗಿದೆ ?

ಆ) ಈ ರೀತಿ ಸಮಪಾತಳಿ ಮಾಡುವಾಗ ಬಳಸಿದ ಖಾಸಗಿ ಬುಲ್‌ಡೋಜರುಗಳ ಸಂಖ್ಯೆ ಎಷ್ಟು?

ಇ) ಸಮಪಾತಳಿ ಮಾಡಲು ಖಾಸಗಿ ಬುಲ್‌ಡೋಜರಿನವರಿಗೆ ಪ್ರತಿ ಘಂಟೆಗೆ ಕೊಟ್ಟ ದರ ಎಷ್ಟು?

ಈ) ಅಗ್ರೋ ಇಂಡಸ್ಟ್ರೀಸ್ ಬುಲ್‌ಡೋಜರ್‌ಗಳ ಪ್ರತಿ ಘಂಟೆಯ ದರ ಎಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡ ಮತ್ತು ನೀರಾವರಿ ಸಚಿವರು).—

ಅ) ೯೩೭.೬೧ ಹೆಕ್ಟೇರ್ಸ್ (೨,೩೬೧ ಎಕರೆಗಳು)

ಆ) ೯

ಇ) ಒಂದು ಘಂಟೆಗೆ ರೂ. ೩೦೦-೦೦

(ಈ) ಒಂದು ಘಂಟೆಗೆ ರೂ. ೩೦೦-೦೦

ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ಬಗ್ಗೆ

೧೨೯೯ (೩೯೭) ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು, ಜಿಲ್ಲಾ ರಸ್ತೆಗಳು ಮತ್ತು ಇತರೆ ಲೋಕೋಪಯೋಗಿ ಇಲಾಖೆಯ ವಶದಲ್ಲಿರುವ ರಸ್ತೆಗಳ ಉದ್ದವೆಷ್ಟು ?

ಆ) ಈ ರಸ್ತೆಗಳ ಪಕ್ಕದಲ್ಲಿರುವ ಮರಗಳು ಯಾರ ಉಸ್ತುವಾರಿಗೆ ಒಳಪಟ್ಟಿವೆ ?

ಇ) ಈ ಮರಗಳು ಸಾಕಷ್ಟು ಹಾಳಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಈ ಮರಗಳ ಉಸ್ತುವಾರಿ ಮತ್ತು ರಕ್ಷಣೆಯನ್ನು ರಸ್ತೆಯ ಪಕ್ಕದ ಹಿಡುವಳಿದಾರರಿಗೆ ವಹಿಸಿ, ರಕ್ಷಿಸುವ ಯೋಜನೆಯೇನಾದರೂ ಸರ್ಕಾರದವರಲ್ಲಿದೆಯೇ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ರಸ್ತೆಯ ವರ್ಗೀಕರಣ	ರಸ್ತೆಯ ಉದ್ದ (ಕಿ. ಮೀ.)
(೧) ರಾಷ್ಟ್ರೀಯ ಹೆದ್ದಾರಿಗಳು	೧,೯೬೮
(೨) ರಾಜ್ಯ ಹೆದ್ದಾರಿಗಳು	೭,೯೧೨
(೩) ಜಿಲ್ಲಾ ಮುಖ್ಯ ರಸ್ತೆಗಳು	೧೫,೯೭೨
(೪) ಇತರ ಜಿಲ್ಲಾ ರಸ್ತೆಗಳು	೭,೦೯೫
(೫) ಹಳ್ಳಿ ರಸ್ತೆಗಳು	೪೫,೯೨೫

ಆ) ಸರ್ಕಾರದ ಆಜ್ಞೆ ನಂ. ಎಫ್. ಎಫ್. ಡಿ. ೫೬ ಎಫ್‌ಎಸಿ ೮೧ ; ದಿನಾಂಕ ೨೮ನೇ ಆಗಸ್ಟ್ ೧೯೮೨ರ ಪ್ರಕಾರ ಬಿದರೆ, ದಕ್ಷಿಣ ಕನ್ನಡ, ಕೊಡಗು, ಹಾಸನ, ಗುಲ್ಬರ್ಗ, ಶಿವಮೊಗ್ಗ, ಧಾರವಾಡ, ಬೆಳಗಾವಿ, ಮೈಸೂರು, ಮಂಡ್ಯ, ಬೆಂಗಳೂರು ; ಈ ಹನ್ನೊಂದು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿರುವ ಮರಗಳು : ಅರಣ್ಯ ಇಲಾಖೆಯವರ ಉಸ್ತುವಾರಿಕೆಗೆ ಒಳಪಟ್ಟಿರುತ್ತದೆ.

ಉಳಿದ ಎಂಟು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಯ ಮರಗಳ ಉಸ್ತುವಾರಿಯು ಲೋಕೋಪಯೋಗಿ ಇಲಾಖೆಗೆ ಒಳಪಟ್ಟಿರುತ್ತದೆ. ಇದಲ್ಲದೆ ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ರಸ್ತೆಗಳ, ಇತರ ಜಿಲ್ಲಾ ರಸ್ತೆಗಳ ಮತ್ತು ಹಳ್ಳಿ ರಸ್ತೆಗಳ ಮರಗಳ ಉಸ್ತುವಾರಿಯು ಲೋಕೋಪಯೋಗಿ ಇಲಾಖೆಗೆ ಒಳಪಟ್ಟಿರುತ್ತದೆ.

ಇ) ಇಲಾಖೆಯ ಉಸ್ತುವಾರಿಕೆಗೆ ಒಳಪಡುವ ರಸ್ತೆ ಬದಿಯ ಮರಗಳನ್ನು ನೋಡಿಕೊಳ್ಳಲಾಗುತ್ತಿದೆ.

ಈ) ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ

೧೫೦ (ಚಿಟಿಳಿ) ಶ್ರೀ ಶಿವಸಂಗಪ್ಪ ಸಿದ್ದಪ್ಪ ಕಡಪಟ್ಟಿ (ಹುನಗುಂದ).—ಮಾನ್ಯ ಲೋಕೋಪಯೋಗಿ ಉಚ್ಚುಕಟ್ಟು ಪುದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕೃಷ್ಣ ಮೇಲ್ದಂಡೆಯ ಯೋಜನೆಯ ನಾರಾಯಣಪುರ ಹಾಗೂ ಆಲಮಟ್ಟಿ ಜಲಾಶಯಗಳಲ್ಲಿ ಮುಳುಗಡೆಯಾಗುವ ಭೂಮಿ ಹಾಗೂ ಊರುಗಳು ಎಷ್ಟು ? (ತಾಲ್ಲೂಕುವಾರು ಅಂಕಿಗಳು)

ಆ) ವಿಜಾಪುರ ಜಿಲ್ಲೆಯಲ್ಲಿ ಇಷ್ಟು ಭೂಮಿ ಹಾಗೂ ಊರುಗಳು ಮುಳುಗಡೆಯಾಗುತ್ತಿದ್ದರೂ ಯೋಜನೆಯ ಪ್ರಕಾರ ಮೊದಲನೆಯ ಹರಿತದಲ್ಲಿ ನೀರಾವರಿಯಾಗುವ ಕ್ಷೇತ್ರ ಎಷ್ಟು ?

ಇ) ಅನೇಕ ಶತಮಾನಗಳಿಂದ ಬರಗಾಲಕ್ಕೆ ತುತ್ತಾಗುವ ಈ ಜಿಲ್ಲೆಗೆ ಮೊದಲನೆಯ ಹಂತದಲ್ಲಿಯೇ ಪ್ರಾಶಸ್ತ್ಯತೆ ಕೊಟ್ಟು ಹೆಚ್ಚಿನ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸುವ ವಿಚಾರ ಸರ್ಕಾರಕ್ಕೆ ಇದೆಯೇ ?

ಈ) ಹಾಗಿದ್ದಲ್ಲಿ ನಿರ್ದಿಷ್ಟಪಡಿಸಿದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಕ್ಷೇತ್ರಕ್ಕೆ ಯಾವ ಯಾವ ಇಸವಿಯಲ್ಲಿ ನೀರು ಕೊಡಲಾಗುವುದು ಹಾಗೂ ಈ ಬಗ್ಗೆ ಆಯವ್ಯಯ ಪಟ್ಟಿಯಲ್ಲಿ ೧೯೮೬-೮೭ರಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗಿದೆ ಹಾಗೂ ಮುಂದಿನ ೪ ವರ್ಷಗಳಲ್ಲಿ ಪ್ರತಿ ವರ್ಷ ಎಷ್ಟು ಹಣ ಒದಗಿಸಿ ಖರ್ಚುಮಾಡಿ ನಿರ್ದಿಷ್ಟಪಡಿಸಿದ ಎಷ್ಟು ಎಕರೆ ಜಮೀನಿನಲ್ಲಿ ನೀರಾವರಿ ಮಾಡಲಾಗುವುದು ?